Regd No B C. 155

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

Sn

ಸತ್ಯವಾದಿ

ಸ್ಥಾಪಕರು— ಅರಮನೆ ಸಿರಸ್ತೆದಾರ್ ಎಂ ವಿ. ಸುಬ್ಬರಾಯುರು

18—9—1964

[2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ಶಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow
ಗೋಸಂರಕ್ಷಣೆ ಮಾಡಿ

ಆ ಬ್ಬ ಬ್ಬಾ !

ದಕ್ಷಿಣ ಜರ್ಮನಿಯಲ್ಲಿರುವ ಫ್ಲೀಕ್ ಎಂಬ ಊರಿನಲ್ಲಿ ಒಂದು ದೊಡ್ಡ ಪೀಪಾಯಿ ಇದ್ದು ಅದರಲ್ಲಿ 60000 ಲೀಟರು ಮಧು ತುಂಬಿರುತ್ತದೆ ; ಪೀಪಾಯಿಯು ಒಳಗೆ 20 ಮಂದಿ ಕುಳಿತುಕೊಂಡು ಮಧುವನ್ನು ಹುವಸ್ವೇಚ್ಛೆಯಾಗಿ ಈ ಂಟ ಬಹುದು. ಇದಕ್ಕೆ ಇನ್ನಿಲ್ಲದ ನೂಕು ನುಗ್ಗಲು ! ಅಷ್ಟು ಇಷ್ಟು ಕೂಟ್ಟರೆ ಸಾಲದು ; ಮದ್ಯದಲ್ಲೇ ಮುಳುಗಿ ತೇಲಿ ಬಾಗಲೇ ತೃಪ್ತಿ ಎನ್ನುತ್ತಾರೆ ಅನೇಕ ಜರ್ಮನ್ನರು ! (ಯು ಪಿ ಎಸ್)

❀

ಮೈಸೂರಿನ ಕಾಣಿಕೆ

ರಾಷ್ಟ್ರೀಯ ರಕ್ಷಣಾನಿಧಿಗೆ ಮೈಸೂರು ರಾಜ್ಯದಲ್ಲಿ 34385066.88 ರೂಗಳು ಸಂಗ್ರಹವಾಗಿದೆ.

ಮೈಸೂರು ಪೌರಸಭೆ

ಮುಂಡಿನ ಸಾರಿಯ ಅಧ್ಯಕ್ಷ ಸ್ಥಾನಕ್ಕೆ ಶ್ರೀ ವೆಂಕಟಲಿಂಗಯ್ಯ (ಕಾಂ), ಶ್ರೀ ಶ್ರೀಕಂಠಶರ್ಮ (ಏ) — ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಬಿ. ಬಾಲಯ್ಯ (ಕಾಂ) ಶ್ರೀ ವೇದಾಂತ ಹೆಮ್ಮಿಗೆ (ಏ) ತಮ್ಮ ನಾಮಪತ್ರವನ್ನು ಸಲ್ಲಿಸಿದ್ದಾರೆ ಚುನಾವಣೆಯು ಈ ತಿಂಗಳು 30 ರಂದು ನಡೆಯುಲಿದೆ

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾಂ. ಧರ್ಮಾಧಿಕಾರಿ
ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ
19 ಶನಿವಾರ ತ್ರಯೋದಶಿ ಧನಿಷ್ಠ

ಶ್ರೀ ಅನಂತ ವ್ರತ ಪ್ರಯುಕ್ತ ನಾಳೆ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

60 ಲಕ್ಷ ರೂಗಳ
ಅಕ್ರಮ ಪದಾರ್ಥಗಳು, ಕರೆನ್ಸಿ

ಮಧ್ಯ ಬೊಂಬಾಯಿನಲ್ಲಿ ಮೊನ್ನೆ ನಿವಾಸಗಳ ಮೇಲೆ ಕೇಂದ್ರ ಎಕ್ಸೈಜ್ ಅಧಿಕಾರಿಗಳು ನಡೆಸಿದ ಧಾಳಿಯಲ್ಲಿ 60 ಲಕ್ಷ ರೂಗಳ ಅಕ್ರಮವಾಗಿ ಹೊಂದಿದ್ದ ಪದಾರ್ಥಗಳು ಮತ್ತು ಕರೆನ್ಸಿಯನ್ನು ವಶ ಪಡಿಸಿಕೊಂಡರು .

★

ಅಲ್ಲೂ ಅವಿಶ್ವಾಸ

ಮದಂತಸು— ಮುಂದಿನ ಶಾಸನ ಸಭಾ ಅಧಿವೇಶನದಲ್ಲಿ ಒಬ್ಬ ಡಿ ಎಂ ಕೆ ಸದಸ್ಯಂಯಾ ಒಬ್ಬ ಕಮ್ಯೂನಿಸ್ಟು ಸದಸ್ಯರೂ ಮದಂತಸು ಮಂತ್ರಿಮಂಡಲದ ವೇಲೆ ಅವಿಶ್ವಾಸ ನಿರ್ಣಯ ತಂಬಹುದೆಂದು ಹೇಳಲಾಗಿದೆ

★

ಭೀಕರ ಕೊಲೆ

ತ್ಯಮಗೊಂಡಲದ ಹೃದಯಭೇದಕ ವಾರ್ತೆ ! ದೊಡ್ಡಬೆಲೆಯ ಒಬ್ಬ ಹೆಂಗಸನ್ನು ರಾಗಿ ಕೊಡ ವುದಾಗಿ ಹೇಳಿ ಒಬ್ಬನ ಕರೆದುಕೊಂಡು ಹೋಗಿ, ಅಕೆಯನ್ನು ಕೊಲೆ ಮಾಡಿ ಅವಳಲ್ಲಿದ್ದ ಒಡವೆ ವಸ್ತುಗಳನ್ನು ಅಪಹರಿಸಿ, ಅವಳ ದೇಹವನ್ನು; ತನ್ನ ಧಾನ್ಯದ ಹಗೇವಿನಲ್ಲಿ ಹಾಕಿದ್ದನು ಶನಿವೆ ನಡೆಯುತ್ತಿದೆ.

ಮಹಾರಾಷ್ಟ್ರ ಸರಕಾರವು ತನ್ನ ನೌಕರರಿಗೆ ಸೆಪ್ಟಂಬರು 1 ರಿಂದ ತುಟ್ಟಿ ಭತ್ಯ ರೂ 5 ಹೆಚ್ಚಾಗಿ ಕೊಡಲು ನಿರ್ಧರಿಸಿದೆ.

ಸಿಂಗಪುರ— ಅಕಸ್ಮಾತ್ತಿಕ ಮೇಲೆ ಚೀನಾಕ್ಕೆ ಹಕ್ಕಿಲ್ಲವೆಂದು ಹೇಳಲಾಗುತ್ತಿದೆ.

ಬ್ರೋಚಿನಲ್ಲಿ ಧೂಳಿನಿಂದ ಕೂಡಿದ ಗಾಳಿಯು ಒಂದು ವಿದ್ಯಾಶಾಲೆಯ ಮೇಲ್ಛಾವಣಿ ಹಾಳಾ ಮೂರು ಹುಡುಗಿಯರು ಗಾಯಗೊಂಡರು.

ಲೋಕಸಭೆಯಲ್ಲಿ
❀ ಸಭಾ ಪರಿತ್ಯಾಗ ❀

ಬೆಂಗಳೂರಿನಲ್ಲಿ
ಬಹು ದೊಡ್ಡ ಹೋಟಲು

' ಐದು ನಕ್ಷತ್ರ ಅಂತರರಾಷ್ಟ್ರೀಯ ಹೋಟಲನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸರಕಾರವು ತೀವ್ರವಾಗಿ ಯೋಚಿಸುತ್ತಿದೆಯೆಂದೂ, ಕೆಲವು ಮಂದಿ ಸ್ಥಳೀಯ ಮತ್ತು ಹೊರಗಿನವರು ಈ ಕಾರ್ಯ ನಡೆಸಲು ಮುಂದೆ ಬಂದಿದ್ದಾರೆಂದೂ, ಸರಕಾರವೂ ಇದರಲ್ಲಿ ಸ್ವಲ್ಪ ಹಣ ಹಾಕುವ ಯೋಜನೆಯಿದೆಯೆಂದೂ ರೇಸ್ ಕೋರ್ಸ್ ನಗರದಿಂದ ಅಚೆ ಹಾಕಲ್ಪಟ್ಟು ಈಗಿನ ರೇಸ್ ಕೋರ್ಸ್ ಸ್ಥಳದಲ್ಲಿ ಹೋಟಲು ಸ್ಥಾಪಿಸುವ ಯೋಜನೆಯಿದೆಯೆಂದೂ ಮುಖ್ಯಮಂತ್ರಿಗಳು ಹೇಳಿರುವರು.

★

ರಷ್ಯದ ನೆರವು

ನವದೆಹಲಿ— ರಷ್ಯಾ ಭಾರತಕ್ಕೆ 10 ವರ್ಷಗಳ ಅವಧಿಯಲ್ಲಿ ವಾಪತಿ ಮಾಡಲ್ಪಡುವ ಮತ್ತು ಶೇಕಡ 2 ಬಡ್ಡಿಯ 60 ಕೋಟಿ ರೂಗಳನ್ನು ಸಾಲವಾ ಕೊಡಲಿದೆ: ಎಂಐಜಿ ತಯಾರಿಕೆಯ ಸಂಬಂಧಿಸಿದ ವ್ಯಾಜಿಕ್ಟಿಗೆ ಈ ಋಣ ಹೆಚ್ಚು ಭಾಗ ಉಪಯೋಗಿಸಲಾಗುವುದು.

❀

ನಗರ ಸಭೆಗೆ ನೀಗ್ರೋಗಳು

ಟಸ್ಕೆಗಿ— ಇಲ್ಲಿಯ ನಗರ ಸಭೆಯ ಚುನಾವಣೆಯು ಶ್ವೇತರ ಎದುರಾಗಿ ಸ್ಪರ್ಧಿಸಿದ್ದ ನೀಗ್ರೋಗಳು ಎಂದು ಸ್ಥಾನ ಪಡೆದರು : 100 ವರ್ಷಗಳ ಹಿಂದೆ ನಡೆದ ಸಿವಿಲ್ ವಾರ್ ನಂತರ ಈವರೆಗೆ ಶ್ವೇತರ ವಿರುದ್ಧ ಯಾವ ಸಾರ್ವಜನಿಕ ಸಂಸ್ಥೆಗೂ ನೀಗ್ರೋಗಳು ಸ್ಪರ್ಧಿಸಿರಲಿಲ್ಲ.

ನವದೆಹಲಿ— ಮುರಾದ್ ಘಟನೆಯಲ್ಲಿ ವಾಲ್ಕಾಟ್ಗ ಸಂಬಂಧದಲ್ಲಿ ಲೋಕಸಭೆಯಲ್ಲಿ ನಾಥ್ ಪೈಯವರು ಮಾಡಿದ ಕೆಲವು ವಿಷಯುಗಳನ್ನು ವ್ಯಂದಿಯಲ್ಲಿ ತೆಗೆ ಹಾಕಲು ಸ್ವೀಕರರು ಮಾಡಿದ ಆಜ್ಞೆಯನ್ನು ಪ್ರತಿಭಟಿಸಿ ವಿರೋಧ ಪಕ್ಷದವರೆಲ್ಲ ಸಭಾಪರಿತ್ಯಾಗ ಮಾಡಿದರು.

★

ಸಿರಸಿ ಬಂದ್

ಸಿರಸಿ— ಜೆಲೆ ವಿರಿಕೆ ವಿರುದ್ಧ ಎಸ್ಸೆಸ್ಪಿ ಯುವಂ ರಾಜ್ಯಾದ್ಯಂತ ಚಳವಳಿಯಲ್ಲಿ, ಶಾ|| 25 ರಂದು ಸಿಸ್ಸಿ ಬಂದ್ ನೆವೇರಿಸಲು ನಿರ್ಧರಿಸಲಾಗಿದೆ.

★

ಮಹಿಳೆಯರಿಗೆ ಕಾವಲಿಗೆ

ಟೋಕಿಯೊ— ಒಲಂಪಿಕ್ ಗ್ರಾಮದಲ್ಲಿ ಮಹಿಳಾ ವಾಸಸ್ಥಾಗಳ ರಾತ್ರಿಹಗಲು ಉಸ್ತವಾರಿಗೆ 30 ಜಪಾನೀ ಮಹಿಳಾ-ಪೋಲೀಸರು ನೇಮಿಸಲ್ಪಟ್ಟಿದ್ದಾರೆ: ಅತರಿಗೆ ವಾಕಿ ಟಾಕಿ ಶಿಳ್ಳೆ, ಹಗ್ಗ, ಕೈಕೋಳಗಳು ಕೊಡಲಾಗಿದೆ

★

ನವದೆಹಲಿ— ಜೂಜ್ ಜುಲೈನಲ್ಲಿ ಜಮ್ಮು ಕಾಶ್ಮೀರದಲ್ಲಾದ ಬಾಂಬು ಸ್ಫೋಟಗಳು ಪಾಕಿಸ್ತಾನಿ ಗೂಢಚಾರರು ಮತ್ತು ಏಜೆಂಟರ ಕಾರ್ಯವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಪುರಾತನ ನಾಣ್ಯಗಳು

ಧುವಸೇಶ್ವರ— ಕ್ರಿ ಶ 759 ರಿಂದ 1400 ರೊಳಗಿನ 170 ನಾಣ್ಯಗಳ ಗಂಟು ಭೂವಿಜ್ಞಾನಿಗಳು ಜಟ್ಟೆಯಲ್ಲಿ ಸಿಕ್ಕಿದೆ.

ವರ್ಣಾಶ್ರಮಧರ್ಮ

ಈ

(ಮುಂದುವರಿದುದು)

ಒಬ್ಬನು ಮೃತಪಟ್ಟರೆ ಅವನ ಕರ್ಮಾಂಶಂಗಳನ್ನು ಮಾಡುವುದೂ ವರ್ಣಾಶ್ರಮ ಧರ್ಮದ ಕ್ರಿಯೆಯಾಗಿರುತ್ತೆ ; ವರ್ಣಾಶ್ರಮಧರ್ಮವನ್ನು ಕ್ರಮವಾಗಿ ಅನುಸರಿಸುವವನು ಹೆಣವನ್ನು ಹೂಳುವುದಿಲ್ಲ ; ಈಚಿನ ವಿಜ್ಞಾನಿಗಳು, ಹೆಣವನ್ನು ಭೂಮಿಯಲ್ಲಿ ಹೂತು, ಅದು ಭೂಮಿಯೊಂದಿಗೆ ಸೇರಿದರೆ ನೈಟ್ರಿಕ್ ಆವ್ಲ ಮುಂತಾದ ವಿಷಪದಾರ್ಥಗಳು ಉದ್ಭವವಾಗುತ್ತದೆಂದೂ, ಅದು ಹತ್ತಿರದಲ್ಲಿರುವ ಕೊಳ ಭಾವಿಗಳ ನೀರನ್ನೂ ಮತ್ತು ಸಮೀಪದ ವಾತಾವರಣವನ್ನೂ ಕೆಡಿಸುತ್ತದೆಂಡೂ, ಅದರ ಸಂಪರ್ಕವನ್ನು ಹೊಂದಿದ ಮನುಷ್ಯರಿಗೆ ಭಯಂಕರ ವ್ಯಾಧಿಗಳು ಬರುತ್ತದೆಂದೂ ತಿಳಿಸಿರುತ್ತಾರೆ ; ಹಿಂದುಗಳು ಹೆಣವನ್ನು ದಹಿಸುವದರಿಂದ ಆ ರೀತಿ ಆಗಲು ಅವಕಾಶವೇ ಇಲ್ಲ.

ಪ್ರಪಂಚದಲ್ಲಿ ಇಂದು ಅನೇಕ ಜಾತಿಗಳಿದ್ದರೂ ಕೂಡ, ಇಸ್ಲಾಂ, ಈಸಾಯಿ, ಬೌದ್ಧ ಮತ್ತು ಹಿಂದು ಜಾತಿಗಳು ಮಾತ್ರ ಪ್ರಪಂಚದ ಹೆಚ್ಚಿನ ಜನರಿಂದ ಅನುಸರಿಸಲ್ಪಡುತ್ತಿವೆ : ಅವರುಗಳಲ್ಲಿ ಮುಸ್ಲಿಮರು ತಮ್ಮ ಜಾತಿಯಲ್ಲಿ ಮಾತ್ರ ದಯೆ ಮತ್ತು ತ್ಯಾಗವನ್ನು ಹೊಂದಿರುತ್ತಾರೆ : ಈಸಾಯಿಗಳು ಪ್ರಪಂಚದ ಜನರೆಲ್ಲರೂ ಸಹೋದರರೆಂದು ಬರಿಯ ಘೋಷಣೆ ಮಾಡುತ್ತಿದ್ದಾರೆ ; ಬೌದ್ಧರು ಪ್ರಪಂಚದ ಎಲ್ಲಾ ಪ್ರಾಣಿಗಳಲ್ಲಿಯೂ ದಯೆಯನ್ನು ಬೋಧಿಸುತ್ತಾರೆ : ಆದರೆ ನಿಜವಾಗಿ ಪರೀಕ್ಷಿಸಿದರೆ ವಿಶ್ವಪ್ರೀತಿಯನ್ನು ಆಚರಣೆಯಲ್ಲಿ ತಂದಿರುವವರಲ್ಲಿ ಹಿಂದೂಗಳೇ ಮೊದಲಿಗರು.

ಮಹಮದೀಯರು ಅನ್ಯಜಾತಿಯವರನ್ನು 'ಕಾಫಿರ' ರೆಂದು ಕರೆಯುತ್ತಾರೆ, ಮತ್ತು ಅವರನ್ನು ನಾಶಗೊಳಿಸಲು ಪ್ರಯತ್ನಿಸುತ್ತಾರೆ ಮತ್ತು ಕಾಫಿರರು ಅವರ ಕೈಯ್ಯಲ್ಲಿ ಸಾಯುವುದಕ್ಕೇ ಇದ್ದಾರೆಂದು ಭಾವಿಸುತ್ತಾರೆ : ಈಸಾಯಿಗಳು ಅನ್ಯರನ್ನು ತಮ್ಮ ಜಾತಿಯವರಿಗೆ ಸಮಾನವಾಗಿ ಭಾವಿಸುವುದಿಲ್ಲ : ಇದಕ್ಕೆ ಅವರು 'ಜ್ಯೂ' ಗಳಿಗೆ ತೋರಿಸಿದ ಕಾರ್ಯದಿಂದಲೇ ಗೊತ್ತಾಗುತ್ತದೆ ; ಷೇಕ್ಸ್ ಪಿಯರನ 'ಮರ್ಚೆಂಟ್ ಆಫ್ ವೆನಿಸ್' ನಾಟಕವು ಈ ಅಭಿಪ್ರಾಯವನ್ನು ಒಹಳ ಚೆನ್ನಾಗಿ ಸ್ಪಷ್ಟಪಡಿಸುತ್ತದೆ ಮತ್ತು ಅವರು ಅನ್ಯರಿಗೆ ಸಹಿಷ್ಣುತೆಯು ಸಂಕುಚಿತತೆಯಿಂದ ದೂರವಾಗಿಲ್ಲ ; ಬೌದ್ಧಧರ್ಮವು ನಿಜವಾಗಿ ಹೇಳಿದಲ್ಲಿ ಹಿಂದೂ ಧರ್ಮದಿಂದಲೇ ಉತ್ಪತ್ತಿಯಾದ ಜಾತಿಯಾಗಿರುತ್ತದೆ : ಕೆಲವು ಹಿಂದೂ ಧರ್ಮದ ವಿಷಯಗಳನ್ನು ನಂಬದೇ ಇರುವುದರಿಂದ, ಅದು ಹಿಂದೂಧರ್ಮಕ್ಕಿಂತ ಬೇರೆಯೇ ಅದ ಜಾತಿ ಎಂಬಡಾಗಿ ಹೇಳುತ್ತಿದ್ದಾರೆ ; ಸ್ವಾಮಿ ವಿವೇಕಾನಂದರು ಮಾತಿನಲ್ಲಿ ಹೇಳುವುದಾದರೆ, ಬೌದ್ಧಜಾತಿಯು ಹಿಂದೂಧರ್ಮವನ್ನು ಎದುರಾಯಿಸಿದ ಮಗುವಾಗಿರುತ್ತೆ : ಬೌದ್ಧಮತವು ಪ್ರಪಂಚದ ಎಲ್ಲಾ ಪ್ರಾಣಿಗಳಲ್ಲಿಯೂ ದಯೆಯನ್ನು ಬೋಧಿಸುತ್ತದೆ : ಆದರೆ ಹಿಂದೂಧರ್ಮವು ಪ್ರಪಂಚದ ಎಲ್ಲಾ ಜಂತುಗಳಿಗೂ ಕೊನೆಗೆ ಸಸ್ಯಗಳಿಗೂ ದಯೆ ತೋರಿಸಬೇಕೆಂದು ಬೋಧಿಸುತ್ತದೆ. ಸರ್ವೇಶ್ವರನಾದ ಭಗವಂತನು ಈ ಪ್ರಪಂಚದ ಕಲ್ಲು, ಮಣ್ಣು, ಮರಗಿಡಗಳಿಗೆ ಇತ್ಯಾದಿ ಪ್ರತಿಯೊಂದರಲ್ಲೂ ಇದ್ದಾನೆಂದು ಹಿಂದುವು ತಿಳಿದಿದ್ದಾನೆ. ನಾವುಗಳೆಲ್ಲಾ ತಿಳಿದಿರುವಂತೆ ಈಚೆಗೆ ಸರ್ ಜೆ ಸಿ ಬೋ ಸ್‌ರವರು ಸಸ್ಯಗಳಿಗೂ ಜೀವವಿದೆಯೆಂಬುದನ್ನು ಕಂಡುಹಿಡಿದಿದ್ದಾರೆ ; ಆದರೆ ಸಹಸ್ರಾರು ವರ್ಷಗಳ ಹಿಂದೆಯೇ ಈ ವಿಷಯವು ಭಾರತದೋಗ್ಯ ಉಪನಿಷತ್ತಿನಲ್ಲಿಯೂ, ಮನುಸಂಹಿತೆಯಲ್ಲಿಯೂ ಮಹಾಭಾರತದಲ್ಲಿಯೂ ಹೇಳಲ್ಪಟ್ಟಿದೆ.

— ಮುಂದುವರಿಯುವುದು —

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಶ್ರೀ ಪ್ರೊಫೆಸರ್ ರವೀಂದ್ರಕುಮಾರ್ ಸಿದ್ಧಾಂತಶಾಸ್ತ್ರಿ M. A., P. R. S. ರವರ 'ನಾಶವಾಗುತ್ತಿರುವ ಭಾರತೀಯ ಸಂಸ್ಕೃತಿ' ಎಂಬ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ.

ಅ. ಸ. ಅಯ್ಯಂಗಾರ್, ಹೊಂಗೂರು.

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲ್ಯಾಂಡ್ ಜನಭರಿತ 2 ನೇ ವಾರ

.... ಎ. ವಿ ಎಂ. ರವರ ಅತ್ಯುನ್ನತ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ– ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದ್ರ, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಅಪೆರಾ— 18–9–64 ರಿಂದ

ಅತ್ಯುನ್ನತ ಕನ್ನಡ ಚಿತ್ರ [ದಿನ 3 ಆಟಗಳು]

ಪೋಸ್ಟ್ ಮಾಸ್ಟರ್

ಪಾತ್ರ– ವಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

SHAKTI

SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿಮಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ಸೇರುತ್ತ ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವಂ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4.